ಫಾರ್ಮಕಾಲಜಿ ಫಲಿತಾಂಶಗಳನ್ನು ತಡೆ ಹಿಡಿದಿರುವುದು

೧೬೬೮ ಶ್ರೀ ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮೆಡಿಕಲ್ ಕಾಲೇಜಿನ ಫಾರ್ಮಕಾಲಜಿ ಕುರಿತ ಆಂತರಿಕ ಮೌಲ್ಯ ಮಾಪನದ ಫಲಿತಾಂಶವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಫಲಿತಾಂಶವನ್ನು ತಡೆಹಿಡಿಯಲು ಈ ಪರೀಕ್ಷೆಯಲ್ಲಿ ಓರ್ವ ಉನ್ನತಾಧಿಕಾರಿಯಂವರ ಬಂಧು (ವಿದ್ಯಾರ್ಥಿನಿ) ಅನುತ್ತೀರ್ಣವಾಗಿರುವ ಪ್ರಯುಕ್ತ ಪುನರ್‌ಮೌಲ್ಯ ಮಾಪನಕ್ಕೆ ಸೂಚನೆ ಕೊಟ್ಟಿರುವುದರಿಂದ ಫಲಿತಾಂಶ ಪ್ರಕಟಣೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇಂತಹ ಕಾನೂನು ಬಾಹಿರ ಅಧಿಕಾರಿಗಳ ಮೇಲೆ ಕ್ರಮಕ್ಕೆಗೊಂಡು ಕೂಡಲೇ ಫಲಿತಾಂಶವನ್ನು ಪ್ರಕಟಿಸಲಾಗುವುದೇ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಬಂದಿದೆ.

ಆ) ಇಲ್ಲಾ.

ಇ) ಉದ್ಭವಿಸುವುದಿಲ್ಲ.

ಶ್ರೀ ಪಿ. ಎಂ ಚಿಕ್ಕಬೊರಯ್ಯ.—ಮಾನ್ಯ ಅಧ್ಯಕ್ಷರೇ, ಸುಮಾರು ೧೫–೨೦ ದಿವಸಗಳಕಾಲ ಮೈಸೂರಿನಲ್ಲಿ ಆ ಶಾಲೆಯ ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಾರೆ. ಪರೀಕ್ಷೆಯು ಫಲಿತಾಂಶವನ್ನು ನೀಡದೇ ಇರುವುದರಿಂದ ಈ ರೀತಿ ಮುಷ್ಕರ ನಡೆಸಿದ್ದಾರೆ. ಈ ಮುಷ್ಕರ ನಡೆಯಲು ಕಾರಣ ಏನು? ಪರೀಕ್ಷೆ ಫಲಿತಾಂಶವನ್ನು ಯಾರ ನಿರ್ದೇಶನ ನಿಲ್ಲಿಸಿದ್ದೀರಿ? ಫಲಿತಾಂಶ ತಡೆಹಿಡಿಯುವುದಕ್ಕೆ ಕಾರಣ ಏನೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಈ ಪರೀಕ್ಷೆ ಫಲಿತಾಂಶವನ್ನು ನಿಲ್ಲಿಸಬೇಕೆಂದು ಹೇಳಿ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರವರು ಬರೆದಿದ್ದರು ಆದುದರಿಂದ ನಿಲ್ಲಿಸಲಾಗಿದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಅಧ್ಯಕ್ಷರೇ, ಇಂಟರ್‌ನಲ್ ಅಸೆಸ್‌ಮೆಂಟ್ ಸರಿಯಾಗಿ ಆಗಿಲ್ಲ ಎನ್ನುವ ಕಾರಣದಿಂದ ಪರೀಕ್ಷೆ ಫಲಿತಾಂಶವನ್ನು ನಿಲ್ಲಿಸಿದ್ದಾರೆಂದು ಗೊತ್ತಾಯಿತು. ಯಾರ ಇಂಟರ್‌ನಲ್ ಅಸೆಸ್‌ಮೆಂಟ್ ಫಲಿತಾಂಶ ಬಂದಿಲ್ಲವೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಲಿಖಿತ ಇಂಟರ್‌ನಲ್ ಎಕ್ಸಾಮಿನೇಷನ್‌ನಲ್ಲಿ ಮೌಲ್ಯಮಾಪನ ಮಾಡತಕ್ಕ ಸಂದರ್ಭದಲ್ಲಿ ಮೈನಸ್ ಮಾರ್ಕ್ಸ್ ಕೊಟ್ಟಿದ್ದಾರೆ. ಸುಮಾರು ೬೭ ಪರ್ಸೆಂಟ್ ಅಷ್ಟು ಜನ ವಿದ್ಯಾರ್ಥಿಗಳು ಇದರಲ್ಲಿ ಫೇಲ್ ಆಗಿದ್ದಾರೆ. ಮೈನಸ್ ಮಾರ್ಕ್ಸ್ ಕೊಡತಕ್ಕದ್ದು ಯೂನಿವರ್ಸಿಟಿ ರೆಗ್ಯುಲೇಷನ್ ಪ್ರಕಾರ ಇಲ್ಲ. ಆದುದರಿಂದ ಪುನಃ ಪರೀಕ್ಷೆ ನಡೆಸಬೇಕೆಂದು ಹೇಳಿ ರಿಜಿಸ್ಟ್ರಾರ್‌ರವರು ಕಾಗದ ಬರೆದಿದ್ದರು. ಆ ಪ್ರಕಾರ ಈ ಪರೀಕ್ಷೆಯನ್ನು ಪುನಃ ನಡೆಸಬೇಕೆಂದು ಸರ್ಕಾರ ಆದೇಶ ನೀಡಿದೆ

೧೨–೦೦ ಮಧ್ಯಾಹ್ನ

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಒಂದು ಪ್ರಶ್ನೆ ಇದೆ. ಇಂಟರ್ನಲ್ ಅಸೆಸ್‌ಮೆಂಟ್‌ನಲ್ಲಿ ಹೆಚ್ಚು ಜನ ಫೇಲ್ ಆಗಿರುವ ಕಾರಣಕ್ಕಾಗಿ ಯಾವುದಾದರೂ ಫಲಿತಾಂಶ ತಡೆಹಿಡಿದಿದ್ದು ಇಲ್ಲಿಯವರೆಗೆ ಮಾನ್ಯ ಮಂತ್ರಿಯವರ ಗಮನಕ್ಕೆ ಬಂದಿದೆಯೆ?

ಶ್ರೀ ಬಿ. ರಾಚಯ್ಯ.—ಇಂಟರ್ನಲ್ ಎಗ್ಸಾಮಿನೇಷನ್ ನಡೆಸತಕ್ಕ ಕಾಲದಲ್ಲಿ ಯೂನಿವರ್ಸಿಟಿ ರೂಲ್ಸ್ ಮತ್ತು ರೆಗ್ಯುಲೇಷನ್ ಪ್ರಕಾರ ನಡೆಸದಿದ್ದರೆ ಯೂನಿವರ್ಸಿಟಿಯವರು ಅದನ್ನು ನಿಲ್ಲಿಸಿ ಪುನಃ ಪರೀಕ್ಷೆ ನಡೆಸುವುದಕ್ಕೆ ಅವರಿಗೆ ಹಕ್ಕಿದೆ. ಆದರ ಪ್ರಕಾರ ಕೇಳಿದ್ದರು. ಆದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ.